# ರೇ

## ಬೇರಿನಿಂದ ಹೊಮ್ಮಿದ ಕೊಂಬೆಗಳ ನೆನಕೆ



ಮೇ 2ನೇ ತಾರೀಕಿಗೆ ಸರಿಯಾಗಿ ಸತ್ಯಜಿತ್ ರೇ ಹುಟ್ಟಿ ನೂರು ವರ್ಷಗಳಾದವು. ಅವರ ಚಿತ್ರಪಟಗಳ ಬಗೆಗೆ ಆನ್‌ಲೈನ್‌ನಲ್ಲಿ ಕನ್ನಡದ ಸೂಕ್ಷ್ಮ ಸಂವೇದನೆಯ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮಾತನಾಡಿದರು. ವಿವಿಧೆಡೆ ಅವರ ಕೃತಿ–ಕಾರ್ಯಗಳ ಮೆಲುಕು ಹಾಕುವ ಡಿಜಿಟಲ್ ಕಾರ್ಯಕ್ರಮಗಳು ನಡೆದವು. ಕೋವಿಡ್ ದುರಿತ ಕಾಲದಲ್ಲಿ ಅವರ ಶತಮಾನೋತ್ಸವಕ್ಕೆ ನಿಜಕ್ಕೂ ಸಿಗಬೇಕಿದ್ದ ಮನ್ನಣೆ ಸಿಗಲಾರದಾಯಿತಲ್ಲ ಎಂಬ ಕೊರಗೂ ಅನೇಕರಿಗೆ ಇದೆ.

1961ರಲ್ಲೇ ಸತ್ಯಜಿತ್ ರೇ ಅವರ ಚಿತ್ರದಲ್ಲಿ ಬಂಗಾಳದ ಪ್ರತಿಭಾವಂತೆ ಅಪರ್ಣಾ ಸೆನ್ ಅಭಿನಯಿಸುವ ಅವಕಾಶ ಪಡೆದಿದ್ದರು. ಆಗ ಅವರಿಗಿನ್ನೂ ಹದಿನಾರು ವರ್ಷ ವಯಸ್ಸು. ರೇ ಅವರು ತಮ್ಮ ಬದುಕಿನ ಪ್ರಾಯದಲ್ಲಿ ಹೇಳಿದ ಕಿವಿಮಾತುಗಳೇ ತಮ್ಮನ್ನೂ ನಿರ್ದೇಶಕಿಯನ್ನಾಗಿಸಿದವು ಎಂದು ಅಪರ್ಣಾ ಹೇಳುತ್ತಲೇ ಬಂದಿದ್ದಾರೆ. ರೇ ಅವರಿಗೆ ನೂರು ದಾಟಿದ ಸಂದರ್ಭದಲ್ಲೂ ಅವರು ಅದನ್ನೇ ಪುನರುಚ್ಚರಿಸಿದರು.

‘ಸತ್ಯಜಿತ್ ರೇ ಅವರು ಚಿತ್ರರಂಗದಲ್ಲಿ ಬಿಟ್ಟಿರುವ ಬೇರುಗಳು ಆಳವಾದವು. ಅವುಗಳ ಸಾರ ಸತ್ವ ಹೀರಿಕೊಂಡು ಬೇರೆ ಬೇರೆ ಟಿಸಿಲುಗಳು ಬೆಳೆದಿವೆ. ಮಲಯಾಳಂನಲ್ಲಿ ಅಡೂರು ಗೋಪಾಲಕೃಷ್ಣನ್, ಅರವಿಂದನ್, ಕನ್ನಡದಲ್ಲಿ ಗಿರೀಶ್ ಕಾಸರವಳ್ಳಿ, ಗಿರೀಶ ಕಾರ್ನಾಡ, ಬಂಗಾಳದಲ್ಲಿ ಅವರಿಂದ ಪ್ರೇರಿತರಾದವರ ಸಂಖ್ಯೆ ಇನ್ನೂ ದೊಡ್ಡದಿದೆ. ಸತ್ಯಜಿತ್ ರೇ ಅವರ ಚಿತ್ರಪಥವನ್ನು ಸೂಕ್ಷ್ಮವಾಗಿ ಗಮನಿಸಿ, ಅದರಿಂದ ಪ್ರೇರಿತವಾದ ಮನಸ್ಸುಗಳಿವು’ ಎಂದು ಅಪರ್ಣಾ ಹೆಮ್ಮೆಯಿಂದ ನೆನೆದರು.

ಆ ಕಾಲದ ನಟಿಯೂ ರಾಜಕಾರಣಿಯೂ ಆಗಿದ್ದ ನರ್ಗಿಸ್ ದತ್, ‘ಭಾರತದ ಬಡತನವನ್ನು ಸತ್ಯಜಿತ್ ರೇ ವಿಶ್ವಕ್ಕೆ ಮಾರಾಟ ಮಾಡಿದರು’ ಎಂಬರ್ಥದಲ್ಲಿ ಟೀಕಿಸಿದ್ದರು. ಆದರೆ, ಸತ್ಯಜಿತ್ ರೇ ತಮ್ಮ ನೆಲದ ವಾಸ್ತವ ಚಿತ್ರಿಕೆಗಳನ್ನೇ ಸಿನಿಮಾದಲ್ಲಿ ಉತ್ಪ್ರೇಕ್ಷೆ ಇಲ್ಲದೆ ಮರುಸೃಷ್ಟಿಸಿದ್ದರು ಎನ್ನುವುದನ್ನೂ ಅಪರ್ಣಾ ಸ್ಮರಿಸಿದರು. ■



# ಸೋನಂ ಗೈಡ್ ಸೆಕ್ಷನ್

■ ವಿಶಾಖ ಎನ್.

ಕೋವಿಡ್ ಎರಡನೇ ಅಲೆಯ ಬೀಸು ಈ ಪರಿಯಾಗಿ ಕಾಡುತ್ತಿರುವಾಗ ಸಾಮಾನ್ಯವಾಗಿ ಎದ್ದಿರುವ ಪ್ರಶ್ನೆ–ಸೆಲೆಬ್ರಿಟಿಗಳು ಏನು ಮಾಡುತ್ತಿದ್ದಾರೆ. ಈ ದುರಿತ ಕಾಲದಲ್ಲಿ ಎಲ್ಲರಿಗೂ ಅವರವರ ವಲಯದವರ ಸಮಸ್ಯೆಗಳನ್ನು ಎದುರಿಸುವ ತುರ್ತು ಇದ್ದಿರಬಹುದು. ಸೋನು ಸೂದ್ ತರಹದವರು ವರ್ಷದಿಂದಲೂ ಚಾಚುತ್ತಿರುವ ಉದ್ದದ ಸಹಾಯಹಸ್ತ ಈ ಕಾಲದ ಫ್ಯಾಂಟಸಿಯೇ ಹೌದು. ಕೆಲವು ನಟಿಯರು ಈಗಲೂ ರಾಜಕೀಯ ವಾಗ್ಯುದ್ಧದಲ್ಲಿ ತೊಡಗಿ, ಕೆಸರೆರಚುತ್ತಿರುವಾಗ ಅನಿಲ್ ಕಪೂರ್ ಮಗಳು ಕಣ್ಣು ಅಗಲಿಸುವಂತಹ ಕೆಲಸ ಮಾಡುತ್ತಿದ್ದಾರೆ. ಸೋನಂ ಕಪೂರ್ ಅಹುಜಾ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ‘ಗೈಡ್ ಸೆಕ್ಷನ್’ ತೆರೆದಿದ್ದಾರೆ.

ದಾನಿಗಳಿಗೆ ದಾರಿ, ಪ್ಲಾಸ್ಮಾ ದಾನಿಗಳಿಗೆ ದಾರಿ, ಕೋವಿಡ್–19 ಬಂದು ದಿಕ್ಕೇ ಇಲ್ಲದವರು ಆಸ್ಪತ್ರೆಗೆ ಸೇರಿದರೆ ಅವರಿಗೆ ನೆರವು ನೀಡುವುದು ಹೇಗೆ, ವ್ಯಾಕ್ಸಿನ್ ಎಲ್ಲೆಲ್ಲಿ ಸಿಗುತ್ತದೆ, ಏನು–ಎತ್ತ, ಮನೆಯಲ್ಲೇ ಕೋವಿಡ್ ಗುಣಪಡಿಸಿಕೊಳ್ಳುವ ಮಾರ್ಗಗಳು ಯಾವುವು.... ಇಂತಹ ಸಂಗತಿಗಳನ್ನು ಅವರ ‘ಗೈಡ್ ಸೆಕ್ಷನ್’ ಒಳಗೊಂಡಿದೆ.

ಪರಿಣತ ವೈದ್ಯರು, ನಿಜಕ್ಕೂ ಅಗತ್ಯ ಇರುವವರಿಗೆ ದಾನದ ಮೊತ್ತ ತಲುಪಿಸುವ ಸಹಾಯ ಸಂಸ್ಥೆಗಳ ಮಾಹಿತಿ, ಮನೆಯಲ್ಲೇ ಕೋವಿಡ್‌ಗೆ ಚಿಕಿತ್ಸೆ ಪಡೆಯುವಾಗ ವಹಿಸಬೇಕಾದ ಕ್ರಮಗಳ ಟಿಪ್ಸ್ ಎಲ್ಲವನ್ನೂ ಈ ಸೆಕ್ಷನ್ ಒಳಗೊಂಡಿದೆ. ಕೋವಿಡ್ ಬಂದಮೇಲೆ ಆಗುವ ಮಾನಸಿಕ ಸಮಸ್ಯೆಗಳನ್ನು ನೀಗಿಕೊಳ್ಳಲು ಸಮಾಲೋಚನೆ ನಡೆಸುವವರ ಸಂಪರ್ಕವನ್ನೂ ಅವರು ನೀಡಿದ್ದಾರೆ. ಪಕ್ಕಾ ಮಾಹಿತಿಯನ್ನು ಸೋಸಿ ತಾವು ಪ್ರಕಟಿಸಿರುವುದರಿಂದ ಅನೇಕರಿಗೆ ನೆರವಾಗುತ್ತದೆ ಎನ್ನುವುದು ಸೋನಂ ಅನುಭವದ ಮಾತು. ದೇಶದ ಅನೇಕರು ಅಲ್ಲಿನ ಮಾಹಿತಿ ಪಡೆದುಕೊಂಡ ಮೇಲೆ ತಮಗೆ ಅನುಕೂಲವಾಗಿದೆ ಎಂದು ಪ್ರತಿಕ್ರಿಯಿಸಿರುವುದು ಸೋನಂ ಮನೋಬಲ ಹೆಚ್ಚಿಸಿದೆ. ಯಾರಾದರೂ ಅವರ ಈ ಕೆಲಸದ ಕುರಿತು ಪ್ರತಿಕ್ರಿಯೆ ಕೇಳಿದರೆ, ‘ನಾನೇನೂ ಮಹಾ ಕೆಲಸ ಮಾಡಿಲ್ಲ. ನಮಗೆ ಗೊತ್ತಿರುವ ಸರಿಯಾದ ಮಾಹಿತಿಯನ್ನು ಅಗತ್ಯ ಇರುವವರಿಗೆ ಸಿಗುವಂತೆ ಮಾಡುವುದು ಈಗ ಕಷ್ಟವೇನೂ ಅಲ್ಲ. ಸಹಾಯ ಮಾಡದಿದ್ದರೂ ಸರಿ, ಜನರ ದಾರಿ ತಪ್ಪಿಸಬಾರದು’ ಎನ್ನುತ್ತಾರಷ್ಟೆ. ■